ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ 174 ನ್ಯಾಕ್‌ನಿಯೋಜನೆ 2016-17 ವ&ನಿ

ಕಾಲೇಜು ಶಿಕ್ಷಣ ಆಯುಕ್ತರಕಛೇರಿ,
ಬೆಂಗಳೂರು, ದಿನಾಂಕ:06-02-2017.

ಇವರಿಗೆ:

ಜಂಟಿ ನಿರ್ದೇಶಕರು,
ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ,
ಬೆಂಗಳೂರು/ಮಂಗಳೂರು/ಶಿವಮೊಗ್ಗ/
ಧಾರವಾಡ/ಮೈಸೂರು/ಕಲಬುರಗಿ.

ಮಾನ್ಯರೆ,

ವಿಷಯ: ನ್ಯಾಕ್ ಮಾನ್ಯತೆಗೆ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಒದಗಿಸುವ ಬಗ್ಗೆ.

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ನ್ಯಾಕ್ ಪರಿವೀಕ್ಷಣಾ ಅವಧಿಯಲ್ಲಿ ಕಾರ್ಯಭಾರ ನಿರ್ವಹಿಸಲು ಉಪನ್ಯಾಸಕರನ್ನು ಅಥವಾ ಕಛೇರಿ ಕಾರ್ಯ ನಿರ್ವಹಿಸಲು ಆಡಳಿತ ಸಿಬ್ಬಂದಿಗಳನ್ನು ಕೋರಿ ನ್ಯಾಕ್ ಮಾನ್ಯತೆಗೊಳಪಡುತ್ತಿರುವ ಕಾಲೇಜುಗಳಿಂದ ಸ್ವೀಕರಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಹತ್ತಿರದ ಕಾಲೇಜುಗಳಿಂದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ಸದರಿ ಅವಧಿಗೆ ಮಾತ್ರ ನಿಯೋಜಿಸಲು ತಮ್ಮ ಹಂತದಲ್ಲಿಯೇ ಕ್ರಮಕೈಗೊಂಡು ಈ ಕಛೇರಿಗೆ ಮಾಹಿತಿ ನೀಡಲು ಸೂಚಿಸಿದೆ.

ತಮ್ಮ ವಿಶ್ವಾಸಿ,

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

ಪ್ರತಿ

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಅಗತ್ಯ ಕ್ರಮಕ್ಕಾಗಿ (ನ್ಯಾಕ್ ಮಾನ್ಯತೆಗೊಳಪತ್ತಿರುವ ಕಾಲೇಜುಗಳಿಗೆ ಸಿಬ್ಬಂದಿಗಳ ಅವಶ್ಯಕತೆಯಿದ್ದಲ್ಲಿ ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರನ್ನು ಸಂಪರ್ಕಿಸುವಂತೆ ಸೂಚಿಸಲಾಗಿದೆ ಹಾಗೂ ನ್ಯಾಕ್ ಅವಧಿ ಮುಗಿದ ತಕ್ಷಣ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಮೂಲ ಕಾಲೇಜಿನಲ್ಲಿ ಕರ್ತವ್ಯ ಹಾಜರಾಗಲು ಸೂಚಿಸುವುದು)
2. ಮ್ಯಾನೇಜರ್, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಅಗತ್ಯ ಕ್ರಮಕ್ಕಾಗಿ.
3. ಸಮನ್ವಯಾಧಿಕಾರಿಗಳು, ನ್ಯಾಕ್ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಮಾಹಿತಿಗಾಗಿ.
4. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳ ಆಪ್ತ ಸಹಾಯಕರುಗಳಿಗೆ-ಮಾಹಿತಿಗಾಗಿ.
5. ಕಛೇರಿ ಪ್ರತಿ.

*All JD's Letter NAC-1 (Nuworthy)*